8) ಸವಣೂರು

9) ಶ್ರೀರಂಗಪಟ್ಟಣ

10) ರಾಯಚೂರು

11) ಮುಂಡಗೋಡು

2) ಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗದವರಿಗಾಗಿ 79 ವಸತಿ ಶಾಲೆಗಳನ್ನು ಪ್ರಾರಂಭಿಸಿ ನಡೆಸುತ್ತಿದೆ. ಪ್ರತಿ ವಸತಿ ಶಾಲೆಗೆ ಶಾಲಾ ಕಟ್ಟಡ, ವಿದ್ಯಾರ್ಥಿನಿಲಯಗಳು, ಶಿಕ್ಷಕರ ಗೃಹಗಳು ಮತ್ತು ಸಿಬ್ಬಂದಿ ಗೃಹಗಳು ಇವುಗಳಿಂದ ಕೂಡಿದ ಶಾಲಾ ಸಂಕೀರ್ಣವನ್ನು ನಿರ್ಮಾಣ ಮಾಡಬೇಕಾಗಿದ್ದು, ಆಯವ್ಯಯದ ಲಭ್ಯತೆ ಮೇರೆಗೆ ಭಾಗಶಃ ಕಟ್ಟಡಗಳನ್ನು ಸುಮಾರು ೧೭ ವಸತಿ ಶಾಲೆಗಳಿಗೆ ನಿರ್ಮಿಸಲಾಗಿದೆ. ಉಳಿದ ೬೨ ವಸತಿ ಶಾಲೆಗಳ ಪೈಕಿ ನಿವೇಶನ ಲಭ್ಯವಿರುವ ೪೧ ಶಾಲೆಗಳಿಗೆ ಹುಡ್ಕೋದಿಂದ ಸಾಲ ಪಡೆದು ಕಟ್ಟಡ ನಿರ್ಮಾಣ ಮಾಡಲು ವ್ಯವಸ್ಥೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಅನುದಾನದಿಂದ ಪರಿಶಿಷ್ಟ ವರ್ಗದ ಎರಡು ವಸತಿ ಶಾಲೆಗಳ ಶಾಲಾ ಸಂಕೀರ್ಣ ನಿರ್ಮಾಣವನ್ನು ಕೈಗೊಳ್ಳಲಾಗಿದೆ. ಅಂದರೆ, ಒಟ್ಟು 43 ವಸತಿ ಶಾಲೆಗಳಿಗೆ ಮೊದಲ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲು ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಈ ಪೈಕಿ 34 ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಕೆ ಪ್ರಾರಂಭವಾಗಿದ್ದು, ಇನ್ನುಳಿದ 9 ಕಟ್ಟಡಗಳ ಕಾಮಗಾರಿಕೆಗಳನ್ನು ಪ್ರಾರಂಭಿಸಲಾಗುತ್ತಿದೆ. ಈ ಎಲ್ಲಾ 43 ವಸತಿ ಶಾಲೆಗಳ ಕಟ್ಟಡ ನಿರ್ಮಾಣವನ್ನು ಡಿಸೆಂಬರ್ 2001ರೊಳಗೆ ಪೂರ್ಣಗೊಳಿಸಲು ವ್ಯವಸ್ಥೆ ಮಾಡಲಾಗಿದೆ.

ಇನ್ನೂ 19 ವಸತಿ ಶಾಲೆಗಳ ಪೈಕಿ 11 ಶಾಲೆಗಳಿಗೆ ನಿವೇಶನ ದೊರೆತಿದ್ದು, ಎರಡನೇ ಹಂತದಲ್ಲಿ ಹುಡ್ಕೋದಿಂದ ಸಾಲ ಪಡೆದು ಕಟ್ಟಡ ನಿರ್ಮಾಣ ಮಾಡುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ, ಉಳಿದ 8 ವಸತಿ ಶಾಲೆಗಳಿಗೆ ನಿವೇಶನ ಪಡೆಯಲು ಕ್ರಮ ಜರುಗಿಸಲಾಗಿದೆ.

ಸಹಕಾರ ಸಂಘಗಳು ಮತ್ತು ಕೆ.ಹೆಚ್.ಡಿ.ಸಿಯಲ್ಲಿ ಮಾರಾಟ ಮಾಡುವ ಬಟ್ಟೆಗಳಿಗೆ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್ ಯೋಜನೆ.

299(563)

ಶ್ರೀ ಎಸ್.ಜಿ.ನಂಜಯ್ಯನ ಮಠ್(ಗುಳೇದಗುಡ್ಡ): ಮಾನ್ಯ ರೇಷ್ಮೆ ಮತ್ತು ಜವಳಿ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸಹಕಾರ ಸಂಘಗಳು ಮತ್ತು ಕೆ.ಹೆಚ್.ಡಿ.ಸಿ.ಯಲ್ಲಿ ಮಾರಾಟವಾಗುವ ಬಟ್ಟೆಗಳಿಗೆ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್ ಯೋಜನೆ ಸರ್ಕಾರ ಮುಂದುವರಿಸಿದೆಯೇ?

2) ಹಾಗಿದ್ದಲ್ಲಿ ಶೇಕಡ ಎಷ್ಟು?

3) ಇದರಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು?

Sri M.MAHADEV (Minister for Sericulture and Textiles):

1) ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯನ್ನು ಕೇಂದ್ರ ಸರ್ಕಾರ ಮುಂದುವರಿಸಿಲ್ಲ.

2) ಅನ್ವಯಿಸುವುದಿಲ್ಲ.

3) ಅನ್ವಯಿಸುವುದಿಲ್ಲ.

ವಸತಿ ನಿಲಯದ ಕಟ್ಟಡ.

300(511)

ಶ್ರೀ ಪ್ರಕಾಶ್ ಖಂಡ್ರೆ(ಭಾಲ್ಕಿ): ಮಾನ್ಯ ಸಮಾಜ ಕಲ್ಯಾಣಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿ ಬಿ.ಸಿ.ಎಂ. ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿ ನಿಲಯದ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಟ್ಟಡವನ್ನು ಕಟ್ಟಲು ನಿವೇಶನದ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):